ಬ್ಯಾರಿಯಲ್ಲಿ ಉಷ್ಣಾಂಶ ಳಳ ಡಿಗ್ರಿ ಸೆಲ್ಸಿಯಸ್ ಇದ್ದು ಇರುತ್ತದೆ. ಇದರಲ್ಲಿ ರೈತರದೇನೂ ತಪ್ಪಿಲ್ಲ. ರೈತರುಗಳದ್ದು ತಪ್ಪು ಇಲ್ಲವೆಂದರೂ ಅವರುಗಳಿಗೆ ದಂಡ ಹಾಕುವುದು ಸರಿಯಲ್ಲ. ತಾವು ಇದರ ಬಗ್ಗೆ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಎರಡು ತಿಂಗಳು ನೀರು ಸರಬರಾಜು ಆಗಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಸರಿಯಲ್ಲ, ಒಂದು ತಿಂಗಳು ಮಾತ್ರ ನೀರು ಸರಬರಾಜು ಆಗಿರಲಿಲ್ಲ. ಇದನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಆಗಲೇ ಮಾನ್ಯ ಉದಾಸಿಯವರು ಪ್ರಶ್ನೆ ಕೇಳಬೇಕೆಂದು ಹೇಳಿದ್ದೆ, ಮಾನ್ಯ ರೇವಣಸಿದ್ದಯ್ಯನವರ ಹೆಸರನ್ನು ನಾನು ಕರೆಯಬೇಕಾಗಿತ್ತು. ನಮ್ಮ ಆಫೀಸ್‌ನವರ ಬೇಜವಾಬ್ದಾರಿಯಿಂದ ಈ ರೀತಿ ಆಯಿತು. ಇನ್ನು ಮುಂದೆ ಆಫೀಸ್‌ನವರು ಸರಿಪಡಿಸಿಕೊಳ್ಳುತ್ತಾರೆ.

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕನ್ನಡ ಪಂಡಿತ್ ಪದವಿ ಶಿಕ್ಷಣ.

೨೧೮೨. ಶ್ರೀ ಪಿ. ಎಂ. ಚಿಕ್ಕ ಬೋರಯ್ಯ (ಚಾಮರಾಜ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಎರವಲು ಮೂಲಕ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ೪ ವರ್ಷಗಳ ಕನ್ನಡ ಪಂಡಿತ ಪದವಿ ಶಿಕ್ಷಣ ಕೊಡುತ್ತಿರುವುದು ನಿಜವೇ ಈಚೆಗೆ ಈ ರೀತಿ ಶಿಕ್ಷಣ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢ ಶಾಲೆಗೆ ವರ್ಗಾಯಿಸಿ ಕೊಡುವುದು ಸರ್ಕಾರಕ್ಕೆ ತಿಳಿದಿದೆಯೆ?

ಆ) ಕನ್ನಡ ಪಂಡಿತ ಪದವಿ ಜೊತೆಗೆ ಬಿ. ಇಡಿ ಶಿಕ್ಷಣವನ್ನು ಸ್ವಂತ ಖರ್ಚಿನಲ್ಲಿ ಪಡೆದಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮುಂಬಡ್ತಿಯಲ್ಲಿ ಶೇ. ೨೫ ರಷ್ಟನ್ನು ಮೀಸಲಾಗಿಡಲು ಸರ್ಕಾರ ನಿರ್ಧರಿಸುವುದೇ ?

ಇ) ರಾಜ್ಯದಲ್ಲಿ ಪ್ರಾಚೀನ ಪರಂಪರೆಯನ್ನು ಪ್ರತಿನಿಧಿಸುವ ಈ ಏಕೈಕ ಕನ್ನಡ ಪಂಡಿತ ಪದವಿ ಶಿಕ್ಷಣ ವ್ಯವಸ್ಥೆಯನ್ನು ರಾಜ್ಯದ ವಿಶ್ವ ವಿದ್ಯಾನಿಲಯಕ್ಕೆ ವಹಿಸಿಕೊಡಲು ಸರ್ಕಾರ ಆಲೋಚಿಸುವುದೆ, ಮತ್ತು ಈ ಶಿಕ್ಷಣ ಸಂಸ್ಥೆಯನ್ನು ಕಾಲೇಜು ಮಟ್ಟಕ್ಕೆ ಏರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಈ) ಸದರಿ ಕನ್ನಡ ಪಂಡಿತರಿಗೆ, ತಮಿಳುನಾಡು ಸರ್ಕಾರವು ತಮಿಳು ಭಾಷಾ ಪಂಡಿತ ಅಧ್ಯಾಪಕರಿಗೆ ಕೊಡುವ ಸವಲತ್ತುಗಳನ್ನು ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ. ಹಾಗಿದ್ದಲ್ಲಿ ಯಾವಾಗ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ನಿಜ ತಿಳಿದಿದೆ.

ಆ) ಪರಿಶೀಲಿಸಲಾಗುವುದು.

ಇ) ಈ ಪರಿಶೀಲನೆ ಸದ್ಯಕ್ಕೆ ಇರುವುದಿಲ್ಲ.

ಈ) ತಮಿಳುನಾಡು ಸರ್ಕಾರದ ಸವಲತ್ತುಗಳ ಬಗ್ಗೆ ನಮ್ಮಲ್ಲಿ ಮಾಹಿತಿ ಇರುವುದಿಲ್ಲವಾದ್ದರಿಂದ ಈ ಮಾಹಿತಿಯನ್ನು ತರಿಸಲಾಗುವುದು.

ಶ್ರೀ ಪಿ. ಎಂ. ಚಿಕ್ಕ ಬೋರಯ್ಯ —ಮಾನ್ಯ ಅಧ್ಯಕ್ಷರೇ. ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡುವಾಗ ಕನಿಷ್ಠ ವಿದ್ಯಾರ್ಹತೆ ಎಸ್. ಎಸ್. ಎಲ್. ಸಿ. ಮತ್ತು ಟಿ. ಸಿ. ಹೆಚ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕೆಂದು ಕಾನೂನು ಇದೆ. ಈ ರೀತಿ ಟಿ. ಸಿ. ಹೆಚ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾ ಕೆಲಸ ಮಾಡುತ್ತಿರುವವರನ್ನು ಇನ್ನೂ ಹೆಚ್ಚಿನ ಶಿಕ್ಷಣ ಕೊಡುವುದಕ್ಕೆ ಆಯ್ಕೆ ಮಾಡಿ ಅವರುಗಳಿಗೆ ಹೆಚ್ಚಿನ ಶಿಕ್ಷಣವನ್ನು ಕೊಟ್ಟು ಪುನಃ ಅದೇ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರುಗಳನ್ನಾಗಿ ಮಾಡುವುದರಿಂದ, ಏನು ಪ್ರಯೋಜನ ? ಅದರಿಂದ ಸಮಾಜಕ್ಕೆ ಏನಾದರೂ ಅನುಕೂಲವಾಗುತ್ತದೆಯೇ ಎನ್ನುವುದು ಒಂದು ಪ್ರಶ್ನೆ. ಈ ಬಗ್ಗೆ ಮತ್ತೊಂದು

ಪ್ರಶ್ನೆಯನ್ನು ನಾನು ಕೇಳುವುದೇನೆಂದರೆ, ಈ ದಿಸೆಯಲ್ಲಿ ಪ್ರಾಥಮಿಕ ಶಿಕ್ಷಕರುಗಳಿಗೆ ಹೆಚ್ಚಿನ ಶಿಕ್ಷಣ ಅಂದರೆ ೪ ವರ್ಷದ ಅಧಿಕ ಶಿಕ್ಷಣ ಕೊಡುವುದರಿಂದ ಸರ್ಕಾರಕ್ಕೆ ಎಷ್ಟು ಖರ್ಚು ಬರುತ್ತದೆ? ಇನ್ನು ೩ನೇ ಪ್ರಶ್ನೆ ಎಂದರೆ, ಬಿ. ಎಡ್. ಕ್ಲಾಸಿಗೆ ಪ್ರಾಥಮಿಕ ಶಾಲೆಯ ಶಿಕ್ಷಕರು ಸೇರಿಕೊಳ್ಳಬೇಕಾದರೆ, ಡಿಗ್ರಿ ಅಂದರೆ ಪದವಿಗೆ ಸಮಾನವಾದ ವಿಶೇಷ ತರಬೇತಿ ಪಡೆದಿರಬೇಕೆಂದು ಮೈಸೂರು ಯೂನಿವರ್ಸಿಟಿ ನವರು ರಿಪೋರ್ಟ್ ಕೊಟ್ಟಿದ್ದಾರೆ. ೪ ವರ್ಷಗಳ ವಿಶೇಷ ತರಬೇತಿಯನ್ನು ಪಡೆದವರನ್ನೂ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರುಗಳನ್ನಾಗಿ ನೇಮಕ ಮಾಡುವುದರಿಂದ ಅವರು ಪಡೆದಂಥ ತರಬೇತಿಗೆ ಏನೂ ಬೆಲೆ ಬರುವುದಿಲ್ಲ. ಅದೂ ಅಲ್ಲದೆ ಅವರಿಗೆ ತರಬೇತಿ ಕೊಡುವುದಕ್ಕೆ ಸರ್ಕಾರ ವೃಥಾ ಖರ್ಚು ಮಾಡಿದಂತಾಗುತ್ತದೆನ್ನುವುದೇ ನನ್ನ ಭಾವನೆ ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ೧೯೫೨ನೇ ಇಸವಿಯಲ್ಲಿ ನೇಮಕಾತಿ ಮತ್ತು ಹುದ್ದೆಗಳ ನಿಯಮಗಳನ್ನು ಬದಲಾವಣೆ ಮಾಡಿ ಉರ್ದು ಮತ್ತು ಹಿಂದಿ ಭಾಷೆಗಳಿಗೆ ಶೇಕಡಾ ೨೫ರಷ್ಟು ಒಡ್ತಿಯನ್ನು ಕೊಡಬೇಕೆಂದು ಈ ಕಾನೂನನ್ನು ತಿದ್ದುಪಡಿ ಮಾಡಿದ್ದೇವೆ. ಅದೇ ಪ್ರಕಾರ ಕನ್ನಡ ಭಾಷೆಗೆ ಸಹ ಇದೇ ರೀತಿಯ ಸವಲತ್ತುಗಳನ್ನು ಕೊಡಬೇಕೆಂದು ಬೇಡಿಕೆ ಬಂದಿದೆ ನನಗೆ ವೈಯಕ್ತಿಕವಾಗಿ ಅವರ ಒಂದು ಬೇಡಿಕೆ ಸರಿಯೆಂದು ಕಾಣಿಸಿತ್ತದೆ. ಅದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಸೂಕ್ತ ತಿದ್ದುಪಡಿಯನ್ನು ತಂದು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢ ಶಾಲೆಯ ಶಿಕ್ಷಕರಾಗಿ ಒಡ್ತಿಯನ್ನು ಕೊಡಬೇಕೆಂದು, ಇದರ ಬಗ್ಗೆ ಅವರಿಗೆ ಅವಕಾಶಗಳನ್ನು ಕಲ್ಪಿಸಿಕೊಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಸಭಾಧ್ಯಕ್ಷರೇ, ಸುಮಾರು ಮೂರು ವರ್ಷಗಳಿಂದ ಈ ಒಂದು ಬೇಡಿಕೆಯ ಬಗ್ಗೆ ಆಶ್ವಾಸನೆ ಬಂದಿದೆ. ಶ್ರೀ ಮಾನ್ ರಾಚಯ್ಯನವರು ವಿದ್ಯಾ ಮಂತ್ರಿಗಳಾಗಿದ್ದಾಗ, ಆನಂತರ ಶ್ರೀ ರಘುಪತಿಯವರು ವಿದ್ಯಾ ಮಂತ್ರಿಗಳಾಗಿದ್ದಾಗ ಇದೇ ರೀತಿಯ ಆಶ್ವಾಸನೆಗಳು ಬಂದಿವೆ. ಮೂರು ವರ್ಷಗಳಿಂದ ಸತತವಾಗಿ ಆಶ್ವಾಸನೆ ಬಂದಿದ್ದರೂ ಇದು ಕಾರ್ಯಗತ ಮಾತ್ರ ಆಗಿಲ್ಲ. ದಯವಿಟ್ಟು ಯಾವ ಕಾರಣಕ್ಕಾಗಿ ಆಗಿಲ್ಲ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್,—ಒಂದು ತಿಂಗಳಿನಲ್ಲಿ ಮಾಡುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಕಾವೇರಿ ಜಲ ವಿವಾದ ಕುರಿತು

೧೯೩೦ ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಕಂದಾಯ, ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಮತ್ತು ತಮಿಳುನಾಡುಗಳ ಮಧ್ಯೆ ಕಾವೇರಿ ವಿವಾದವು ಇನ್ನೂ ಇತ್ಯರ್ಥವಾಗಿಲ್ಲ ಎಂಬುದು ನಿಜವೇ ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಈ ವಿಷಯವಾಗಿ ಎಷ್ಟು ಸಭೆಗಳು ನಡೆದಿವೆ ?

ಇ) ಈ ವಿಷಯದ ಬಗ್ಗೆ ಸರ್ಕಾರಕ್ಕೆ ಎಷ್ಟು ಹಣ ಖರ್ಚಾಗಿದೆ ?

ಈ) ವಿವಾದವನ್ನು ಇತ್ಯರ್ಥಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ(ಕಂದಾಯ, ಯೋಜನೆ ಮತ್ತು ನೀರಾವರಿ ಸಚಿವರು).—

ಅ) ಸಾಧು.

ಆ) ೧೯೭೨ರಿಂದ ಇಲ್ಲಿಯವರೆಗೆ ೧೪ ಅಂತರ ರಾಜ್ಯ ಮಂತ್ರಿಗಳ ಸಭೆ ನಡೆದಿದೆ.

ಇ) ವಿವಾದವು ೧೯೭೦ ರಿಂದಲೂ ಇದ್ದು ವಿಚಿತ್ರ ವಿವರವನ್ನು ಒದಗಿಸಲು ಸಾಧ್ಯವಾಗದು.